**ಓ.ಎಸ್.ನಂಃ 276/2021**

**ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 17.10.2025 ರಂದು ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು: 1(ಎ) ಮತ್ತು 1(ಬಿ) ಪ್ರತಿವಾದಿ ಪರ ವಕೀಲರಿಂದಃ**

ನನಗೆ ದಾವ ಸಂಗತಿ, ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ವಾದಿ ನ್ಯಾಯಾಲಯದ ಮುಂದೆ ಬಂದು ಸಾಕ್ಷ್ಯ ನುಡಿಯಲು ತೊಂದರೆ ಇಲ್ಲ. 1985 ರಿಂದಲೂ ಜಿ.ಪಿ.ಎ ಪಡೆದು ನನ್ನ ಹೆಂಡತಿ ಪಡೆದು ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ವಾದಿ ನ್ಯಾಯಾಲಯದ ಮುಂದೆ ಬಂದು ಸಾಕ್ಷ್ಯ ನುಡಿದರೆ ಸತ್ಯಾಂಶ ಹೊರಬರುತ್ತದೆ ಎಂದು ಜಿ.ಪಿ.ಎ ಪಡೆದು ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಆರೋಗ್ಯ ಸಮಸ್ಯೆ ಇದೆ ಎಂದು ತೋರಿಸಲು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ಕಂದಾಯ ಮೇಲ್ಮನವಿ ಪ್ರಾಧಿಕಾರ ಅಥವ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಚಾಮರಾಜನಗರದಲ್ಲಿ ಸಾಕ್ಷ್ಯ ನುಡಿಯಲು ವಾದಿಗೆ ಆರೋಗ್ಯ ಸಮಸ್ಯೆ ಇದೆ ಎಂದು ತೋರಿಸಲು ಯಾವುದೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವ ಸ್ವತ್ತಿನ ಸರ್ವೇ ನಂಃ 296/1ಎ ರ ವಿಸ್ತೀರ್ಣ 6.12 ಗುಂಟೆ ಮತ್ತು 1.08 ಗುಂಟೆ ಜಮೀನು ಇದೆ.

ಪ್ರತಿವಾದಿಗಳಿಗೆ ದಾವ ಸ್ವತ್ತಿನ ಯಾವುದೆ ಹಕ್ಕು ಇಲ್ಲ ಎಂದು ಪರಿಹಾರ ಕೋರಿ ದಾವೆ ಹೂಡಲಾಗಿದೆ. ದಾವ ಸ್ವತ್ತು ಮೂಲತಃ ಕೆಂಪಮ್ಮರವರಿಗೆ ಸೇರಿದ ಸ್ವತ್ತು. ಕೆಂಪಮ್ಮ ರವರು ಚೆನ್ನಪ್ಪರವರ ಮೊದಲನೇ ಹೆಂಡತಿ. ಚೆನ್ನಪ್ಪರವರ 2ನೇ ಹೆಂಡತಿ ಈಗಲೂ ಇದ್ದಾರೆ. ಕೆಂಪಮ್ಮರವರ ಜೀವಿತ ಕಾಲದಲ್ಲಿ ಆಕೆಗೆ ಮಕ್ಕಳಿಲ್ಲದ ಕಾರಣ ಚೆನ್ನಪ್ಪ ಎರಡನೇ ವಿವಾಹವಾಗಿರುತ್ತಾರೆ. ಚೆನ್ನಪ್ಪ ನಾನು ಹೇಳಿದಂತೆ 2ನೇ ವಿವಾಹವಾಗಿಲ್ಲ ಎಂದರೆ ಸರಿಯಲ್ಲ. ಚೆನ್ನಪ್ಪರವರಿಗೆ ಕೆಂಪಪ್ಪ @ ಸುಬ್ಬಮ್ಮ ಮಾತ್ರ ಕಾನೂನು ಬದ್ಧ ಪತ್ನಿ ಎಂದರೆ ಸರಿಯಲ್ಲ. ಕೆಂಪಪ್ಪ @ ಸುಬ್ಬಮ್ಮ ರವರಿಗೆ ಚೆನ್ನಪ್ಪ ಕ್ರಯ ಮಾಡಿಸಿದ್ದರು. ಸದರಿ ಕ್ರಯ ಪತ್ರವನ್ನು ನೋಡಿಲ್ಲ. 1982 ರಲ್ಲಿ ಚೆನ್ನಪ್ಪ ನನಗೆ ಆ ಬಗ್ಗೆ ಹೇಳಿದ್ದರು. ಚೆನ್ನಪ್ಪ ತನ್ನ ಹೆಂಡತಿ ಕೆಂಪಮ್ಮನಿಗೆ ದಾವ ಸ್ವತ್ತನ್ನು ಖರೀದಿ ಮಾಡಿಕೊಟ್ಟ ಬಗ್ಗೆ ನಾನು ಆತನಿಂದ ದಾಖಲೆ ಬರೆಸಿಕೊಂಡಿಲ್ಲ. ದಿಃ 06.01.1950

ರಲ್ಲಿ ಕೆಂಪಪ್ಪ @ ಸುಬ್ಬಮ್ಮ ದಾವ ಸ್ವತ್ತನ್ನು ಕ್ರಯಕ್ಕೆ ಪಡೆದ ದಿನದಂದು ನನಗೂ ಚೆನ್ನಪ್ಪರವರ ಕುಟುಂಬಕ್ಕೂ ಸಂಬಧ ಇರಲಿಲ್ಲ ಎಂದರೆ ಸರಿ.

ಆ ಕಾರಣ ನನಗೆ ದಾವ ಸ್ವತ್ತಿನ ವ್ಯವಹಾರ ವೈಯಕ್ತಿಕವಾಗಿ ತಿಳಿದಿರಲಿಲ್ಲ ಎಂದರೆ ಸರಿ. ಕೆಂಪಪ್ಪ @ ಸುಬ್ಬಮ್ಮ ರವರ ಕ್ರಯ ಪತ್ರವನ್ನು ನೋಡಿದ್ದೇನೆ. ಸದರಿ ಕ್ರಯಪತ್ರದಲ್ಲಿ ಚೆಕ್ಕುಬಂಧಿ LOT ನಂಬರ್ ನಲ್ಲಿ ವಿವರಿಸಿದ್ದು ಮತ್ತು ವಿಸ್ತೀರ್ಣವನ್ನು ಗಜದಲ್ಲಿ ಬರೆದಿರುತ್ತಾರೆ. ದಿಃ 20.04.2007 ರಲ್ಲಿ ಹಿರಿಯ ಸಿವಿಲ್ ನ್ಯಾಯಾಲಯ, ಚಾಮರಾಜನಗರದಲ್ಲಿ ಕೆಂಪಪ್ಪ @ ಸುಬ್ಬಮ್ಮ ಬರೆದಿದ್ದ ವಿಲ್ ಅನುರ್ಜಿತ ಎಂದು ಘೋಷಣೆಯಾಯಿತು. ಆ ಕಾರಣ ದಾವ ಸ್ವತ್ತಿನ ಮೇಲೆ ಹಕ್ಕು ಪ್ರಾಪ್ತವಾಗಿದೆ. ತೆರಕಣಾಂಬಿ ಗ್ರಾಮದ ಸರ್ವೇ ನಂಃ 69 ರಲ್ಲಿ ವಿಸ್ತೀರ್ಣ 4 ಎಕರೆ 33 ಗುಂಟೆಗೆ ಮಾತ್ರ ಹಿರಿಯ ಸಿವಿಲ್ ನ್ಯಾಯಾಲಯ, ಚಾಮರಾಜನಗರದಲ್ಲಿ ಸದರಿ ದಾವೆ ಹೂಡಿದ್ದೆ. ಸದರಿ ದಾವೆ ಸಂಖ್ಯೆಃ 291/2005. ಸದರಿ ದಾವೆಯಲ್ಲೂ ಸಹ ಜಿ.ಪಿ.ಎ ಪಡೆದವನಾಗಿ ನಾನೇ ವಾದಿಯ ಪರ ಸಾಕ್ಷ್ಯ ನುಡಿಯುತ್ತಿದ್ದೆ. ಆ ಕಾರಣ ಸದರಿ ದಾವೆಯ ಸಂಪೂರ್ಣ ಮಾಹಿತಿ ನನಗೆ ಇದೆ ಎಂದರೆ ಸರಿ.

ಸದರಿ ದಾವೆಯಲ್ಲಿ ಈ ದಾವೆಯ ಪ್ರತಿವಾದಿ 1(ಎ) ರವರ ಗಂಡ ಮತ್ತು 1(ಬಿ) ರವರ ತಂದೆಯನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ. ಈ ದಾವ ಸ್ವತ್ತನ್ನು ಓ.ಎಸ್. ಸಂಖ್ಯೆಃ 291/2005 ರಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ವಿಲ್ ನಲ್ಲಿ ಈ ದಾವ ಸ್ವತ್ತು ಇತ್ತು ವಿಲ್ ನ್ನು ಅನುರ್ಜಿತ ಮಾಡಬೇಕು ಎಂದು ಕೇಳಿಕೊಂಡಿದ್ದೆ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಓ.ಎಸ್. ಸಂಖ್ಯೆಃ 291/2005 ರಲ್ಲಿ ಈ ದಾವೆಯ 2ನೇ ಪ್ರತಿವಾದಿ ಈ ದಾವೆಯ 1ನೇ ಪ್ರತಿವಾದಿಯನ್ನು ಮತ್ತು ಈ ದಾವ ಸ್ವತ್ತು ಸರ್ವೇ ನಂಃ 296/1ಎ ನ್ನು ಸೇರಿಸಿಲ್ಲ ಎಂದು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈ ಪ್ರಕರಣದ ವಾದಿ ಮತ್ತು ಆಕೆಯ ಮಕ್ಕಳು ದಿಃ 23.03.2015 ರಂದು ಕ್ರಯ ಪತ್ರದ ಮೂಲಕ ಸರ್ವೇ ನಂಃ 296/1ಎ2 ನ್ನು ಮಾರಾಟ ಮಾಡಿರುವ ಕ್ರಯ ಪತ್ರವನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡ ಕಾರಣ, ಸದರಿ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ನ್ನು ಬರೆಯುವಾಗ ನಾನು ಹಾಜರಿದ್ದೆ.

ನಿಡಿ1 ರ ಒಕ್ಕಣಿಕೆ ಬಗ್ಗೆ ನನಗೆ, ವಾದಿಗೆ ಮತ್ತು ನನ್ನ ಮಕ್ಕಳಿಗೆ ಸಂಪೂರ್ಣ ಮಾಹಿತಿ ಇದೆ. ನಿಡಿ1 ರ ಚೆಕ್ಕುಬಂಧಿಯಲ್ಲಿ ಪಶ್ಚಿಮಕ್ಕೆ- ಪ್ರತಿವಾದಿ 1(ಎ) ರವರಿಗೆ ಸೇರಿದ ಮನೆಯನ್ನು ನಿರ್ಮಾಣವಾಗಿದೆ ಎಂದರೆ ಸರಿ. ಸುಮಾರು 8-10 ವರ್ಷಗಳ ಹಿಂದೆ ಸದರಿ ಮನೆ ನಿರ್ಮಾಣವಾಗಿದೆ. ಸದರಿ ಮನೆಯ ಬಗ್ಗೆ ನಾನು ದಾಖಲಾತಿಯನ್ನು ಸಂಗ್ರಹಿಸಿಲ್ಲ. 2019 ರಲ್ಲಿ ದಾವ ಸ್ವತ್ತಿನ ಮೇಲೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿತ್ತು. ನಿಪಿ9 ನ್ನು ಈ ಪ್ರಕರಣದ ವಾದಿ ಮತ್ತು ಆಕೆಯ ತಾಯಿ ಚೆನ್ನಪ್ಪರವರ ಮೊದಲನೇ ಹೆಂಡತಿ ಕೆಂಪಪ್ಪ @ ಸುಬ್ಬಮ್ಮ ಮತ್ತು 2ನೇ ಪ್ರತಿವಾದಿ ವಿರುದ್ಧ ದಾಖಲಿಸಿದ್ದರು ಎಂದರೆ ಸರಿ. ನಿಪಿ9 ರಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಹಕ್ಕುಗಳನ್ನು ತೀರ್ಮಾನಿಸಿಕೊಳ್ಳುವಂತೆ ಆದೇಶವಾಗಿರುತ್ತದೆ. 1993-94 ನೇ ಸಾಲಿನಲ್ಲಿ ವಾದಿ ಮತ್ತು ಆಕೆಯ ತಾಯಿಗೆ ಸದರಿ ವಿಲ್ ಬಗ್ಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿ.

ಸದರಿ ಆರ್.ಆರ್.ಟಿ. ಸಂಖ್ಯೆ: 52/93-94 ವಜ ಆದ ನಂತರ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ಸದರಿ ಆರ್.ಆರ್.ಟಿ. ಸಂಖ್ಯೆ 52/93-94 ಮುಕ್ತಾಯವಾದ ನಂತರ ಓ.ಎಸ್. ಸಂಖ್ಯೆ: 291/2005 ರಲ್ಲಿ ಈ ದಾವ ಸ್ವತ್ತನ್ನು ಸೇರಿಸಿಲ್ಲ ಎಂದರೆ ಸಾಕ್ಷಿ ಸಂಪೂರ್ಣ ವಿಲ್ ನ್ನೆ ಪ್ರಶ್ನೆ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಓ.ಎಸ್. ಸಂಖ್ಯೆ: 291/2005 ರ ತೀರ್ಪು ಪ್ರತಿವಾದಿಗಳಿಗೆ ಈ ದಾವೆಯ ಪ್ರತಿವಾದಿಗಳಿಗೆ ಬಂಧನಕಾರ್ಯವಾಗುವುದಿಲ್ಲ ಎಂದರೆ ಸರಿ. ಓ.ಎಸ್. ಸಂಖ್ಯೆ: 291/2005 ತೀರ್ಪಿನ ವಿರುದ್ಧ 2ನೇ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ್ದಾರೆ. ಆರ್.ಎ. ಸಂಖ್ಯೆ: 102/2 ಅದು ನಮ್ಮ ಪರ ತೀರ್ಪು ಆಯಿತು. ಸದರಿ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸಿದ್ದು ಮಾನ್ಯ ಉಚ್ಛ ನ್ಯಾಯಾಲಯ ಸದರಿ ತೀರ್ಪಿಗೆ ತಡೆ ನೀಡಿದೆ ಎಂದರೆ ಸರಿ. ಕೆಂಪಮ್ಮ @ ಸುಬ್ಬಮ್ಮ ಮತ್ತು ಬಿ.ಚೆನ್ನಪ್ಪ ರವರು ಸುಬ್ಬಪ್ಪರವರನ್ನು ದತ್ತುಗೆ ಪಡೆದುಕೊಂಡಿದ್ದರು ಎಂದರೆ ಸರಿ. ಸದರಿ ಸುಬ್ಬಪ್ಪ ಪ್ರತಿವಾದಿಗಳ ತಂದೆ ಎಂದರೆ ಸರಿ.

ಕೆಂಪಮ್ಮ @ ಸುಬ್ಬಮ್ಮ ಆಕೆ ದತ್ತು ಮಗ ಚೆನ್ನಪ್ಪನಿಗೆ ದಾವ ಸ್ವತ್ತನ್ನು ವಿಲ್ ಮುಖಾಂತರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ವಿಲ್ ನ್ನು ಹೊರತುಪಡಿಸಿ ಪ್ರತಿವಾದಿಗಳ ತಂದೆ ಕೆಂಪಮ್ಮ @ ಸುಬ್ಬಮ್ಮ ರವರ ಏಕೈಕ ದತ್ತು ಪುತ್ರನಾದ ಕಾರಣ ಆತನಿಗೆ ದಾವ ಸ್ವತ್ತಿನ ಮೇಲೆ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಸುಬ್ಬಪ್ಪ ದಾವ ಸ್ವತ್ತಿಗೆ

ಸಂಬಂಧಿಸದಂತೆ ಯಾರಿಗೂ ಹಕ್ಕು ಕುಲಾಸೆ ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಕಾರಣ ದಾವ ಸ್ವತ್ತಿಗೆ ಪ್ರತಿವಾದಿಗಳೆ ಸಂಪೂರ್ಣ ಮಾಲೀಕರು ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ